ಕಾಮಗಾರಿಗಳನ್ನು ಅರ್ಧಕ್ಕೆ ನಿಲ್ಲಿಸಿದ್ದರಿಂದ ಇವರ ಗುತ್ತಿಗೆಯನ್ನು ರದ್ದುಪಡಿಸಿ ಆರ್. ಟಿ. ಲಕ್ಷ್ಮೀನಾರಾಯಣ, ಗುತ್ತಿಗೆದಾರರಿಗೆ ವಹಿಸಲಾಯಿತು. ಇವರು ಕೂಡ ಕಾಮಗಾರಿಯನ್ನು ಪೂರ್ಣಗೊಳಿಸದೇ ಅರ್ಧಕ್ಕೆ ನಿಲ್ಲಿಸಿದ್ದರಿಂದ ಕಾಮಗಾರಿಯು ಪೂರ್ಣಗೊಂಡಿರುವುದಿಲ್ಲ. ಇವರ ಗುತ್ತಿಗೆಯನ್ನು ಕೂಡ ರದ್ದುಗೊಳಿಸಲಾಗಿರುತ್ತದೆ. ಈಗಎರಡನೇ ಹಂತದ ಯೋಜನೆಯಡಿಯಲ್ಲಿ ಅಕ್ಸಡೇಷನ್ ಪಾಂಡುಗಳನ್ನು ಎರೆಲಟೆಡ್ ಲಗೂನ್‌ಗಳನ್ನಾಗಿ ಪರಿವರ್ತಿಸಿ ಉಪಯೋಗಿಸಿಕೊಳ್ಳಲು ಅನುವು ಮಾಡಲಾಗಿದೆ.

ಮಂಡ್ಯ ನಗರಕ್ಕೆ 2ನೇ ಹಂತದ ಕುಡಿಯುವ ನೀರಿನ ಯೋಜನೆ

783 (860) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ನಗರಕ್ಕೆ ಎರಡನೇ ಹಂತದ ಕುಡಿಯುವ ನೀರಿನ ಯೋಜನೆಯು ಮಂಜೂರಾತಿ ಯೋಜನೆಯ ಕಾಮಗಾರಿ ಅನುಷ್ಠಾನದ ಹಂತದಲ್ಲಿದೆಯೇ?

ಆ) ಹಾಗಿದ್ದಲ್ಲಿ ವಿವರಗಳೇನು?

ಇ) ಪ್ರಸ್ತುತ ಈ ಕಾಮಗಾರಿ ಯಾವ ಹಂತದಲ್ಲಿದೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಈ ಯೋಜನೆಯು 4:92ರಲ್ಲಿ ರೂ. 1,360.00 ಲಕ್ಷಗಳಿಗೆ ಮಂಜೂರಾಗಿದ್ದು, ನವೆಂಬರ್, 2000ದಲ್ಲಿ ಚಾಲನೆಗೊಳಿಸಲಾಗಿದೆ.

ಆ) ಈ ಯೋಜನೆಯಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ:

1. ಶ್ರೀರಂಗಪಟ್ಟಣದ ಬಳಿ ಕಾವೇರಿ ನದೀ ತೀರದಲ್ಲಿ ಮೂಲ ಸ್ಥಾವರ ನಿರ್ಮಿಸುವುದು.
2. 600 ಮಿ.ಮೀ ವ್ಯಾಸದ 12,500 ಮೀಟರ್ ಏರು ಕೊಳವೆ ಮಾರ್ಗ ಅಳವಡಿಸುವುದು.
3. 300 ಅಶ್ವ ಶಕ್ತಿಯ ಪಂಪ್‌ಗಳನ್ನು ಅಳವಡಿಸುವುದು.
4. 17.50 ದಶಲಕ್ಷ ಲೀಟರ್ ಶುದ್ಧೀಕರಣ ಘಟಕ ನಿರ್ಮಿಸುವುದು.
5. 700 ಮಿ.ಮೀ ಗುರುತ್ವಾಕರ್ಷಣ ಕೊಳವೆ ಮಾರ್ಗ ಅಳವಡಿಸುವುದು.
6. ಮೇಲ್ಮಟ್ಟದ ಜಲಸಂಗ್ರಹಾಗಾರಗಳನ್ನು ನಿರ್ಮಿಸುವುದು.

ಇ) ಮಂಡ್ಯ ನಗರಕ್ಕೆ 17.5 ದಶಲಕ್ಷ ಲೀಟರ್ ನೀರನ್ನು ಒದಗಿಸುವ ಕಾಮಗಾರಿಗೆ ಸಂಬಂಧಪಟ್ಟಂತೆ ಕಾಮಗಾರಿಗೆ ಸಂಬಂಧಪಟ್ಟಂತೆ ಮೂಲ ಸ್ಥಾವರದಿಂದ ಮಂಡ್ಯ ನಗರದವರೆಗೆ ಎಲ್ಲಾ ಕಾಮಗಾರಿಗಳನ್ನು ಮುಗಿಸಿ ನವೆಂಬರ್ 2000ದಲ್ಲಿ ಚಾಲನೆ ಮಾಡಲಾಗಿದೆ. ಈ ಹೆಚ್ಚುವರಿ ನೀರನ್ನು ಹಾಲಿ ಇರುವ ವಿತರಣಾ ಜಾಲಕ್ಕೆ ಸಂಪರ್ಕ ಕಲ್ಪಿಸಿ 7 (ಏಳು) ಸಂಖ್ಯೆ ಹಳೆಯ ಮೇಲ್ಮಟ್ಟದ ಜಲ ಸಂಗ್ರಹಾಗಾರಗಳು ಹಾಗೂ ಹೊಸದಾಗಿ ನಿರ್ಮಿಸಿದ ಐದು ಮೇಲ್ಮಟ್ಟದ

ಜಲಸಂಗ್ರಹಾಗಾರಗಳಲ್ಲಿ ಎರಡಕ್ಕೆ ಸಂಪರ್ಕ ಕಲ್ಪಿಸಿ ಉಳಿದ ಜಲಸಂಗ್ರಹಾಗಾರಗಳಿಗೆ ಏರು ಕೊಳವೆ ಆರ್ಗ ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿದ್ದು ಜೂನ್ 2001 ಅಂತ್ಯದ ವೇಳೆಗೆ ಸಂಪರ್ಕ ಕಲ್ಪಿಸಿ ನಗರದ ಎಲ್ಲಾ ಭಾಗಗಳಲ್ಲೂ ನೀರಿನ ಸಮರ್ಪಕ ವಿತರಣೆ ಮಾಡಲಾಗುವುದು.

ತೀರ್ಥಹಳ್ಳಿ ಪುರಪಂಚಾಯತ್‌ನಲ್ಲಿ ನಕಲಿ ಸಾಗುವಳಿ ಚೀಟಿ

784 (987) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕಳೆಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ಪುರ ಪಂಚಾಯತ್‌ನಲ್ಲಿ ನಕಲಿ ಸಾಗುವಳಿ ಚೀಟಿ ಸೃಷ್ಟಿಸಿ ನಿವೇಶನವನ್ನು ಅಕ್ರಮವಾಗಿ ವಿತರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಇ) ಈ ಪ್ರಕರಣವನ್ನು ವಿಚಾರಣೆಗಾಗಿ ಲೋಕಾಯುಕ್ತ ಅಥವಾ ಸಿಓಡಿಗೆ ವಹಿಸಲು ಇರುವ ತೊಂದರೆಯೇನು?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :

ಅ) ಹೌದು, ತೀರ್ಥಹಳ್ಳಿ ಪಟ್ಟಣ ಪಂಚಾಯತ್‌ನಲ್ಲಿ ನೀಡಿರುವ ನಿವೇಶನಗಳ ಹಕ್ಕುಪತ್ರಗಳಲ್ಲಿ ಕೆಲವು ನಕಲಿ ಎಂದು ಕೌನ್ಸಿಲ್‌ನಲ್ಲಿ ಗಮನಿಸಿ ಈ ಕುರಿತಂತೆ ವಿಚಾರಣೆ ನಡೆಸುವಂತೆ ದಿನಾಂಕ 16-02-2000ದ ಸಭೆಯಲ್ಲಿ ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದು ಜಿಲ್ಲಾಧಿಕಾರಿಗಳಿಗೆ ವಿಚಾರಣೆ ನಡೆಸಲು ವಹಿಸಲಾಗಿದೆ.

ಆ) ಜಿಲ್ಲಾಧಿಕಾರಿಗಳು ಶಿವಮೊಗ್ಗ ಇವರ ಆದೇಶದ ಪ್ರಕಾರ ಉಪ ವಿಭಾಗಾಧಿಕಾರಿಗಳು ಶಿವಮೊಗ್ಗ ಉಪ ವಿಭಾಗ ಇವರು ತೀರ್ಥಹಳ್ಳಿ ಪಟ್ಟಣ ಪಂಚಾಯತ್‌ಗೆ ಭೇಟಿ ಕೊಟ್ಟು ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತಾರೆ.

ಇ) ಈ ಪ್ರಕರಣದಲ್ಲಿ ಜಿಲ್ಲಾಧಿಕಾರಿಗಳು ಶಿವಮೊಗ್ಗ ಇವರು ನೀಡುವ ವರದಿಯನ್ವಯ ಮಂದಿನ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದ ನಗರ ಪ್ರದೇಶಗಳ ಸ್ಥಳೀಯ ಸಂಸ್ಥೆಗಳ ವಾರ್ಡ್ ಮೀಸಲಾತಿ

785 (1149) ಶ್ರೀ ಅಗರ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಗರ ಪ್ರದೇಶದ ಸ್ಥಳೀಯ ಸಂಸ್ಥೆಗಳ ವಾರ್ಡ್ ಮೀಸಲಾತಿ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಲಾಗಿದೆಯೇ?

ಆ) ಇದ್ದಲ್ಲಿ ಯಾವ ಮಾದರಿಯನ್ನು ಅಳವಡಿಸಿ ಈ ಮಾರ್ಗಸೂಚಿ ಸೂತ್ರಗಳನ್ನು ರೂಪಿಸಲಾಗಿದೆ?